KACM510003372025

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯಃ ನ.ರಾ.ಪುರ

### ಸಿ.ಸಿ. ನಂಃ **90/2025**

ಫಿರ್ಯಾದುದಾರರು : ಸರ್ಕಾರದ ಪರವಾಗಿ ಎನ್ ಆರ್ ಪುರ ಪೊಲೀಸರು

:ವಿ:

ಆರೋಪಿತರು : 1. ರಾಜೇಶ್ ಎಂ ಯಾನೆ ಪ್ರುವೀಣ್ ಬಿನ್ ಮುಕುಂದೇಗೌಡ, 34 ವರ್ಷ, ವಾಸಃ ಗಾಡಿಕೆರೆ, ಕೆಳಕುಳಿ ಗ್ರಾಮ, ಕೊಪ್ಪ ತಾಲ್ಲೂಕು.

2. ನಂದನ್ ಕುಮಾರ್ ಯಾನೆ ನಂದು ಬಿನ್ ರಘುಚಂದ್ರ, 27 ವರ್ಷ, ವಾಸಃ ಕೂಸ್ಗಲ್,ಸಾರ್ಯ ಗ್ರಾಮ, ನ.ರಾ.ಪುರ ತಾಲ್ಲೂಕು.

3. ವಿ ಬಿ ಓಂಕಾರ್ ಯಾನೆ ವಿಜಯ್ ಕುಮಾರ್ ಬಿನ್ ಬಡಿಯಪ್ಪಗೌಡ, 36 ವರ್ಷ, ವಾಸಃ ಶಾಂತಿಭವನ, ಬಾಳೆಗ್ರಾಮ, ಮೂಡಬಾಗಿಲು, ನ.ರಾ. ಪುರ ತಾಲ್ಲೂಕು.

4. ಮೊಹಮ್ಮದ್ ರಫಿ ಬಿನ್ ಮೊಹಮ್ಮದ್ ಖಾಸಿಂ, 50 ವರ್ಷ, ಮನೋಹರ ಪಾಳ್ಯ, ಕೆ ಹೆಚ್ ಬಿ ಮುಖ್ಯ ರಸ್ತೆ, ಆರ್ ಟಿ ನಗರ, ಬೆಂಗಳೂರು.

5. ಅಬ್ದುಲ್ ರೆಹಮಾನ್ ಯಾನೆ ಸಿದ್ದಿಕ್ ಬಿನ್ ಮೊಹಮ್ಮದ್ ಇಸ್ಮಾಯಿಲ್, 29 ವರ್ಷ, ವಾಸಃ ಹೆಚ್ ಪಿ ಗ್ಯಾಸ್ ಹತ್ತಿರ, ಗೋಡೌನ್ ಎದುರು, ಜೈನ್ ಕಾಲೇಜ್ ಮೂಡಬಿದರೆ, ದಕ್ಷಿಣ ಕನ್ನಡ ಜಿಲ್ಲೆ.

- - -

### ದೋಷಾರೋಪಣೆ

ಶ್ರೀ ರಘುನಾಥಗೌಡ, ಕೆ.ಟಿ., ಬಿ.ಕಾಂ. ಎಲ್.ಎಲ್.ಬಿ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ., ನ.ರಾ.ಪುರ ಆದ ನಾನು ಮೇಲ್ಕಂಡ

KACM510003372025

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ಆಗಸ್ಟ್ ಹಾಗೂ ಸೆಪ್ಟೆಂಬರ್ ಮಾಹೆ 2016 ರಲ್ಲಿ ಆರೋಪಿತರಾದ ನೀವು ಏಕೋದ್ದೇಶದಿಂದ ಒಳಸಂಚು ರೂಪಿಸಿ ಪಿರ್ಯಾದುದಾರರಿಗೆ ಮತ್ತು ಚಾಸಾ 2 ರವರಿಗೆ ರೈಸ್ ಪುಲ್ಲಿಂಗ್ ವಸ್ತುವಿನ ವ್ಯವಹಾರ ಎಂಬ ಹೊಸ ಸನ್ನಿವೇಶವನ್ನು ಸೃಷ್ಟಿ ಮಾಡಿ ಸದರಿ ವ್ಯವಹಾರ ನಡೆಸಿದರೇ ಸಾಕಷ್ಟು ಹಣ ಸಿಗುತ್ತದೆ ಎಂಬ ಬಗ್ಗೆ ತಿಳಿಸಿ ಪಿರ್ಯಾದುದಾರರಿಗೆ ಸದರಿ ವ್ಯವಹಾರದಲ್ಲಿ ಹಣ ತೊಡಗಿಸುವಂತೆ ಉತ್ತೇಜಿಸಿ ಅಪರಾಧಿಕ ಒಳಸಂಚು ಮಾಡಿ ಆ ಮೂಲಕ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 120(ಬಿ) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

2. ದಿನಾಂಕಃ 20/10/2016 ರಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದುದಾರರಿಂದ ರೂ.24 ಲಕ್ಷ ಮತ್ತು ಚಾಸಾ 2 ರವರಿಂದ ರೂ. 6 ಲಕ್ಷ ಹಣವನ್ನು ನಂತರ ದಿನಾಂಕಃ 28/10/2016 ರಂದು ಪಿರ್ಯಾದಿಯಿಂದ ರೂ.50,50,000/- ಹಾಗೂ ದಿನಾಂಕಃ 19/12/2016 ರಂದು ಪಿರ್ಯಾದಿಯಿಂದ ರೂ.20 ಲಕ್ಷ ಹಣವನ್ನು ಬೆಂಗಳೂರಿನ ಲಲಿತ್ ಅಶೋಕ್ ಹೋಟೆಲ್ ನಲ್ಲಿ ಪಡೆದು ಪಿರ್ಯಾದುದಾರರಿಗೆ ನಂಬಿಕೆ ದ್ರೋಹವನ್ನುಂಟು ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 406 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

3. ಮೇಲೆ ಹೇಳಿದ ದಿನಾಂಕ, ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದುದಾರರಿಗೆ ಮತ್ತು ಚಾಸಾ 2 ರವರಿಗೆ ಮೋಸ ಮಾಡುವ ಉದ್ದೇಶದಿಂದ ರೈಸ್ ಪುಲ್ಲಿಂಗ್ ವ್ಯವಹಾರ ಮಾಡಿದರೇ ಸಾಕಷ್ಟು ಲಾಭ ಬರುತ್ತದೆ ಅಂತ ಅವರ ಮೇಲೆ ಪ್ರಭಾವ ಬೀರಿ ಅವರನ್ನು ವಂಚಿಸಿ ಅವರಿಗೆ ನಂಬಿಕೆ ದ್ರೋಹವನ್ನುಂಟು ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 417 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

4. ಮೇಲೆ ಹೇಳಿದ ದಿನಾಂಕ, ಸ್ಥಳದಲ್ಲಿ 1 ನೇ ಆರೋಪಿಯಾದ ನಿಮ್ಮ ಸೂಚನೆಯಂತೆ 3 ನೇ ಆರೋಪಿಯಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದಿಗೆ ಮೋಸದ ರೈಸ್ ಪುಲ್ಲಿಂಗ್ ವ್ಯವಹಾರದ ಬಗ್ಗೆ ಸುಳ್ಳು ಮಾಹಿತಿ ನೀಡಿ ಈ ವ್ಯವಹಾರದಲ್ಲಿ ಹಣ ಹಾಕುವಂತೆ ಉತ್ತೇಜಿಸಿ ತಾನೂ ಕೂಡಾ ಪಿರ್ಯಾದಿಯಂತೆ ಒಬ್ಬ ಕಸ್ಟಮರ್ ನಂತೆ ವರ್ತಿಸಿ ವಂಚಿಸಿದ್ದು ಹಾಗೂ 4 ನೇ ಆರೋಪಿಯಾದ ನೀವು ಸದರಿ ವ್ಯವಹಾರ ಮಾಡಲು ತಾವೇ ಸೃಷ್ಟಿಸಿರುವ ವರ್ ಬಂಡ್ ಇಂಟರ್ ನ್ಯಾಷನಲ್ ಕಂಪನಿಯ ಪ್ರತಿನಿದಿಯಂತೆ ನಟಿಸಿ ತನ್ನ ಬಾಬ್ತು ಕೆಎ 51 ಎಂ ಎ 1040 ರ ಪಾರ್ಚ್ ನೂರ್ ಕಾರಿನಲ್ಲಿ ಹೊಸದುರ್ಗ ತಾಲ್ಲೂಕಿನ ಮುತ್ತೋಡು ಗ್ರಾಮದ ರಾಮ್ಕೋ ಸಿಮೆಂಟ್ ಫ್ಯಾಕ್ಟರಿಯ ಬಳಿಗೆ ಬಂದು ರೈಸ್ ಪುಲ್ಲಿಂಗ್ ವಸ್ತುವನ್ನು ಪರೀಕ್ಷಿಸಲು ಬಂದಂತೆ ನಟಿಸಿ ವಂಚನೆ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 419 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

5. ದಿನಾಂಕಃ21/12/2016 ರಂದು ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದುದಾರರನ್ನು ಹೊಸದುರ್ಗ ತಾಲ್ಲೂಕು, ಮುತ್ತೋಡು ಗ್ರಾಮದ ರಾಮ್ಕೋ (Ramco) ಸಿಮೆಂಟ್ ಕಾರ್ಖಾನೆ ಹತ್ತಿರ ಪಿರ್ಯಾದುದಾರರಿಗೆ ಕೈಯಿಂದ ಹಲ್ಲೆ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

6. ಮೇಲೆ ಹೇಳಿದ ದಿನಾಂಕ, ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದುದಾರರಿಗೆ ಕೊಲೆ ಬೆದರಿಕೆ ಹಾಕಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

7. ಮೇಲೆ ಹೇಳಿದ ದಿನಾಂಕ, ಸ್ಥಳದಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಪಿರ್ಯಾದುದಾರರಿಗೆ ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿ ಸಾಕ್ಷಿಗಳನ್ನು ನಾಶ ಪಡಿಸಿ ತನಿಖೆಯ ದಿಕ್ಕನ್ನು ತಪ್ಪಿಸಲು ಮಂಜುನಾಥ ಮತ್ತು ಶಿವರಾಜ್ ಕುಮಾರ್

ಹೆಸರನ್ನು ಎಳೆದು ತಂದು ಪಿರ್ಯಾದುದಾರರು ದೂರು ದಾಖಲಿಸಲು ವಿಳಂಬ ಆಗುವಂತೆ ಮಾಡಿ ಸಾಕ್ಷ್ಯಾ ನಾಶ ಮಾಡಿರುವುದು ಸಾಬೀತಾಗಿದ್ದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 201 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

8. 1 ನೇ ಆರೋಪಿಯಾದ ನೀವು ಪಿರ್ಯಾದುದಾರರಿಗೆ ಸ್ವಾಮಿಜೀ ವೇಷದಲ್ಲಿ ರೈಸ್ ಪುಲ್ಲಿಂಗ್ ವ್ಯವಹಾರ ಮಾಡಿ ಸುಳ್ಳು ಮಾಹಿತಿ ನೀಡಿ, ದೇವರ ಹೆಸರಿನಲ್ಲಿ ಪಿರ್ಯಾದಿಗೆ ನಂಬಿಸಿ ಪಿರ್ಯಾದಿದಾರರ ಕಡೆಯಿಂದ ರೂ. 94,50,000/- ಹಾಗೂ ಸಾಕ್ಷಿ 2 ರವರ ಕಡೆಯಿಂದ ರೂ.6 ಲಕ್ಷ ಹಣವನ್ನು ಪಡೆದು ಅವರಿಗೆ ವಂಚನೆ ಮಾಡಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ 420 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯದಲ್ಲಿ ಎಸಗಿರುತ್ತೀರಿ.

ಪ್ರಃ1: ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೇ?

ಉ :ಆಃ1:
ಆಃ2: } ತಿಳಿಯಿತು.
ಆಃ3:
ಆಃ4:
ಆಃ5:

ಪ್ರಃ2: ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕಾ?

ಉ :ಆಃ1:
ಆಃ2: } ತಪ್ಪು. ವಿಚಾರಣೆಯಾಗಬೇಕು ಎಂದರು.
ಆಃ3:
ಆಃ4:
ಆಃ5:

ಈ ಮೇಲ್ಕಂಡ ದೋಷಾರೋಪಣೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ : 13 ನೇ ದಿವಸ ಜನವರಿ ಮಾಹೆ 2026.

13/1/2026.

(ರಘುನಾಥಗೌಡ ಕೆ.ಟಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ನ.ರಾ. ಪುರ.